ಗಾಡಿ ಹಿಂದೆ ಕುಳಿತು ಮನೆಗೆ ಬಂದಿದ್ದ. ಊರಲ್ಲೆಲ್ಲ ಲಿಂಗೇಶನ ಸಾವಿನ ಬಗ್ಗೆ ಏನೇನೋ ಗುಲ್ಲೆದ್ದಿತ್ತು. ಲಿಂಗೇಶನ ಸಮಾಧಿ ಮಾಡಿ ಬಂದ ರಾಮಚಂದ್ರನ ಮುಂದೆ ಎರಡು ಆಯ್ಕೆಗಳಿದ್ದವು. ಸ್ವಾಭಿಮಾನದಿಂದ ಚಂದ್ರವತಿಯನ್ನ ತೊರೆದು ತನ್ನ ಬದುಕು ತಾನೇ ಕಟ್ಟಿಕೊಳ್ಳುವುದು, ಇನ್ನೊಂದು ಅದೇ ಸ್ವಾಭಿಮಾನಿ ಕೊಂದುಕೊಂಡು ತನ್ನ ಸ್ವಾರ್ಥಕ್ಕೊಸ್ಕರ ಚಂದ್ರವತಿ ಹೇಳಿದ ಹಾಗೆ ಕೇಳುತ್ತ ಕಣ್ಣಿದ್ದು ಏನೂ ಕಾಣಿಸದಂತೆ ಇರುವುದು. ರಾಮಚಂದ್ರ ತನ್ನಕ್ಕನ ಗಟ್ಟಿತನ, ಧೈರ್ಯಕ್ಕೆ ಆಶ್ಚರ್ಯಗೊಂಡು ಒಬ್ಬ ಹೆಣ್ಣುಮಗಳಿಗೆ ಇರುವ ಕಿಚ್ಚು ರೋಷ ತನಗಿಲ್ಲದಾಯಿತಲ್ಲ ಅಂತ ಹಳಹಳಿಸಿದ್ದ. ಮತ್ತೆ ಗಡಿಯಾರ ಢಣ್ ಢಣ್ ಅಂತ ಮೂರು ಬಾರಿ ಬಾರಿಸಿದಾಗ ವಾಸ್ತವಕ್ಕೆ ಬಂದ ರಾಮಚಂದ್ರ.

***

ರಾಮಚಂದ್ರ ಬಿಟ್ಟೂಬಿಡದೆ ಒಂದಾದ ಮೇಲೊಂದರಂತೆ ಸಿಗರೇಟ್ ಸೇದಿದ. ಸುಮಾರು ಎರಡು ಪ್ಯಾಕೇಟ್ ಕೊಂಡುತಂದಿದ್ದ. ಸಿಗರೇಟು ತುಂಡುಗಳು ಗುಪ್ಪೆ ಬಿದ್ದಿದ್ದವು. ತುಟಿಯನ್ನು ಗಸಗಸ ಒರೆಸಿಕೊಂಡು ಕಣ್ಣನ್ನು ಕೆಂಪಾಗಿಸಿಕೊಂಡು ಸಿಟ್ಟಿನಿಂದ ತಾನು ಸೇದಿ ಬಿದ್ದಿದ್ದ ಸಿಗರೇಟ್ ತುಂಡುಗಳನ್ನು ಕಾಲಲ್ಲಿ ಕಸಪಸ ಅಂತ ತುಳಿಯತೊಡಗಿದ. ಬೆಂಕಿಯಿಂದ ಮೈಯೆಲ್ಲಾ ಸುಟ್ಟುಕೊಂಡು ಮುಕ್ಕಾಲು ಭಾಗ ಸತ್ತಿದ್ದ ಸಿಗರೇಟ್‌ಗಳು ಅವನ ತುಳಿತಕ್ಕೆ ನಜ್ಜುನಜ್ಜಾಗಿ ನಲುಗಿಹೋದವು. ರಾಮಚಂದ್ರನಿಗೆ ಅವನ ಅಜ್ಜಿ ನೆನಪಾದಳು. ಆ ಅಜ್ಜಿ ಇದ್ದಿದ್ದರೆ ಈ ವೇಳೆಗೆ ತನಗೆ ಮದುವೆ ಆಗಿ ಎರಡು ಮಕ್ಕಳ ತಂದೆ ಆಗಿರುತ್ತಿದ್ದ. ರಾಮಚಂದ್ರ ಸಿಗರೇಟ್ ಕೈಯಲ್ಲಿ ಹಿಡಿದು ಕುಳಿಯಿದ್ದರೆ ಅದೆಲ್ಲಿಂದಲೋ ಅಜ್ಜಿ ಪ್ರತ್ಯಕ್ಷಳಾಗಿ, 'ಈ ಹಾಳಾದ ಸಿಗರೇಟ್ ಸೇದಬ್ಯಾಡ. ಮುಖದಲ್ಲಿನ ತೇಜಸ್ಸು ಕಮ್ಮಿಯಾಗಿ ಹಳೇ ಮುದೇತ ಕಂಡಾಗ್ತಿದಿ ನೋಡು. ಆಮೇಲೆ ಯಾರೂ ಹುಡುಗೀನ ಕೊಡಲ್ಲ ನೋಡು' ಅನ್ನುತ್ತಿದ್ದಳು. ಆಗ ರಾಮಚಂದ್ರ ಸರಕ್ಕನೆ ಸಿಟ್ಟಿಗೇರಿ, 'ಅಜ್ಜಿ, ಸಿಗರೇಟ್ ಸೇದಬ್ಯಾಡ ಅನ್ನು, ಸೇದಂಗಿಲ್ಲ. ಆದರೆ, ಮದುವೆ ಸುದ್ದಿ ಮಾತ್ರ ಎತ್ತಬ್ಯಾಡ ನೋಡು' ಅಂತ ಮೂತಿ ಸೊಟ್ಟ ಮಾಡುತ್ತಿದ್ದ. ಭಲೇ ಗಮ್ಮತ್ತು ಇದ್ದ ರಾಮಚಂದ್ರನ ಅಜ್ಜಿ ಮರುಕ್ಷಣವೇ 'ಯಾಕ ಹುಡುಗ, ಸಾಮಾನು ಚೋಲೋ ಐತೆ ಇಲ್ಲೋ' ಅಂತಿತ್ತು. ಸಿಟ್ಟಿನಲ್ಲಿರುತ್ತಿದ್ದ ರಾಮಚಂದ್ರ ಅಜ್ಜಿಯ ಮಾತಿಗೆ ಗೊಳ್ಳನೆ ನಗುತ್ತ 'ನೀ ಒಳ್ಳೆ ಬೆರಕಿ ಮುದುಕಿ ನೋಡು, ಮಾಡೋ ಕೆಲ್ಸ ಮಸ್ತೈತೆ ನೋಡೋಗು' ಅಂತ ಅಜ್ಜಿಯಿಂದ ತಪ್ಪಿಸಿಕೊಳ್ಳುವ ಮಾತಾಡುತ್ತಿದ್ದ.

ರಾಮಚಂದ್ರನಿಗೆ ಸಣ್ಣವನಿಂದಲೂ ಅಜ್ಜಿ ಅಂದ್ರೆ ಪ್ರಾಣ. ಒಮ್ಮೆ ಶಾಲೆಯ ಹಿಂದೆ ರಾಧಾಳ ಜೊತೆ ಪ್ರೀತಿ ಮಾಡುತ್ತಿದ್ದಾಗ ತನ್ನ ಅಜ್ಜಿಗೆ ಸಿಕ್ಕಿಬಿದ್ದಿದ್ದ. ರಾಧಾಳ ವಿಷಯ ಮೊದಲು ಗೊತ್ತಾಗಿದ್ದೆ ಅಜ್ಜಿಗೆ. ರಾಮಚಂದ್ರನ ಮದುವೆ ಮಾಡಬೇಕು ಅಂತ ಅಜ್ಜಿ ಎಷ್ಟು ಪ್ರಯತ್ನಪಟ್ಟರೂ ರಾಮಚಂದ್ರ ಜಗ್ಗಲಿಲ್ಲ. 'ಮೊಮ್ಮಗ ಮದುವೆ ಮಾಡ್ಕೋ. ಎಲ್ಲರೂ ಚಂದ್ರವತಿ ತರಹ ಇರಲ್ಲ, ಜಗತ್ತಿನಲ್ಲಿ ಒಳ್ಳೆದು ಕೆಟ್ಟದು ಎರಡು ಇರ್ತದೆ. ಅದ್ಕೆ ಜಗತ್ತು ಅನ್ನೋದು, ಆದರೆ, ನಾವು ಹೆಂಗೆ ಅನುಸರಿಸಿಕೊಂಡು ಹೋಗ್ತಿವಿ ಅನ್ನೊಂದರ ಮ್ಯಾಲೆ ನಮ್ಮ ಜೀವನ ನಿಂತಿರ್ತದ' ಅಂತ ಮಸ್ತ್ ಹೇಳುತ್ತಿದ್ದಳು. ಆದರೆ, ರಾಮಚಂದ್ರ ತುಟಿಕ್ ಪಿಟಿಕ್ ಅನ್ನದೆ ಮದುವೆ ವಿಷಯದಲ್ಲಿ ಗಟ್ಟಿ ನಿರ್ಧಾರ ಮಾಡಿದ್ದ. ತನ್ನ ಸಿ.ಇ.ಟಿ. ಎಕ್ಸಾಮ್ ಬರೆಯುವುದಕ್ಕೆ ಹೋದಾಗ ಅಜ್ಜಿ ಸತ್ತ ಸುದ್ದಿ ಬಂತು. ಮನೆ ಪಕ್ಕದ ಕಿರಾಣಿ ಅಂಗಡಿಯ ಕಾಯಿನ್ ಬಾಕ್ಸ್‌ಗೆ ಹುಡುಗನೊಬ್ಬ ಫೋನ್ ಮಾಡಿದ್ದ. ಹೌಹಾರಿದ ರಾಮಚಂದ್ರ, 'ಯಾವಾಗ? ಏನಾಗಿತ್ತು? ಚಂದ್ರವತಿ ಎಲ್ಲಿದ್ದಾಳೆ?' ಅಂತ ಮೂರು ನಾಲ್ಕು ಪ್ರಶ್ನೆ ಒಮ್ಮೆಲೆ ಕೇಳಿದ. ಆ ಕಡೆ ಸರಿಯಾದ ಉತ್ತರ ಬರದೆ, 'ನಾಳೆ ಮಣ್ಣು ಮಾಡುತ್ತಾರಂತೆ, ಜಲ್ದಿ ಬರಬೇಕಂತೆ' ಅಂತ ಹೇಳಿ ಫೋನಿಟ್ಟಿದ್ದ. ಪಕ್ಕದಲ್ಲಿದ್ದ ರಾಮಚಂದ್ರನ ಗೆಳೆಯ ಮಂಜುನಾಥ, 'ಯಾಕಲೇ ಏನಾಯಿತು? ಯಾಕಿಷ್ಟು ಗಾಬರಿ ಆಗಿದ್ದಿ?' ಅಂದಾಗ, 'ನಮ್ಮ ಅಜ್ಜಿ ಸತ್ತಾಳಂತ ದೋಸ್ತಾ. ನಾ ಜಲ್ದಿ ಊರಿಗೆ ಹೋಗಬೇಕು' ಅಂತ ಕಣ್ಣು ಒರಸಿಕೊಳ್ಳತೊಡಗಿದ ರಾಮಚಂದ್ರ. 'ಅಲ್ಲಲೇ ದೋಸ್ತಾ, ಟೈಮ್ ಈಗ ರಾತ್ರಿ ಹತ್ತಾಗ್ಯದ. ಈ ವ್ಯಾಳ್ಯಾಗ ಹೋಗೋದು ಸರಿಯಲ್ಲ. ಸುಮ್ನೆ ನಾ ಹೇಳೋದು ಕೇಳು, ನಾನೂ ಬರ್ತೀನಿ ಮುಂಜಾನೆ ಎದ್ದಿದನೆ ಹೋಗಾಮು' ಅಂದ. 'ಇಲ್ಲಪ್ಪ. ನಮ್ಮಜ್ಜಿ ಅಂದ್ರ ಬಾಳಾ ಜೀವ ನನಗಾ, ಅದು